ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ವಂಗಳವಾರ, ದಿನಾಂಕ ೪ನೇ ಫೆಬ್ರುವರಿ ೧೯೮೬/ಮಾಘ ೧೫ ೧೯೦೭ ಶಕ

ಸದಸ್ಯರು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ ೧ ಗಂಟೆ ೦೮ ನಿಮಿಷಗಳಿಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು]

ವಿರೋಧ ಪಕ್ಷದ ಸದಸ್ಯರ ಧರಣಿ ಮುಷ್ಕರ

ಉಚ್ಚ ನ್ಯಾಯಾಲಯದ ಬಾಟ್ಲಿಂಗ್ ಪ್ರಕರಣದಲ್ಲಿ ನೀಡಿದ ತೀರ್ಪಿನ ಮೇರೆಗೆ

(ಮಾನ್ಯ ವಿರೋಧ ಪಕ್ಷದ ಸದಸ್ಯರೆಲ್ಲರೂ ಸಭಾಧ್ಯಕ್ಷರ ಪೀಠದ ಮುಂಭಾಗದಲ್ಲಿರುವ ಆವರಣದಲ್ಲಿ ಧರಣಿ ಕುಳಿತಿದ್ದರು.)

ಅಧ್ಯಕ್ಷರು.—ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ದಯವಿಟ್ಟು ಕೂತು ಕೊಳ್ಳಬೇಕು, ಮತ್ತು ನಿಮ್ಮ ಬೇಡಿಕೆಗಳು ಏನಾದರೂ ಇದ್ದರೆ ಹೇಳಬೇಕು. ಮಾನ್ಯ ಬಂಗಾರಪ್ಪ ನವರೇ ತಾವೂ ಕೂಡ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಬೇಕು. ತಮ್ಮ ಎಲ್ಲ ಸದಸ್ಯರಿಗೂ ಅವರವರ ಸ್ಥಾನದಲ್ಲಿ ಕುಳಿತುಕೊಳ್ಳುವಂತೆ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಮ್ಮ ನಿಲುವಳಿ ಸೂಚನೆ ಏನು ಆಯಿತು ?

ಅಧ್ಯಕ್ಷರು.—ತಾವು ಮೊದಲು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ. ಎಲ್ಲ ಮಾನ್ಯ ಸದಸ್ಯರಿಗೂ ಮಾತನಾಡಲು ನಾನು ಅವಕಾಶವನ್ನು ಕೊಡುತ್ತೇನೆ. ಅವಕಾಶ ಕೊಡದೆ ನಾನು ಮುಂದೆ ಹೋಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು.—ಎಲ್ಲರೂ ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಹಿಂದಿನ ಸಂಪ್ರದಾಯವನ್ನು ಬಿಟ್ಟು ನಾವೂ, ನೀವೂ ಕೂಡಿ ಇಲ್ಲಿ ಒಳ್ಳೆಯ ಸಂಪ್ರದಾಯವನ್ನು ಹಾಕೋಣ. ನೀವು ಏನೂ ಹೇಳಿದರೂ ಅದನ್ನು ಕೇಳುವುದಕ್ಕೆ ನಾನು ತಯಾರಿದ್ದೇನೆ. ಆದೇ ರೀತಿ ನಾನು ಹೇಳಿದ್ದನ್ನು ತಾವು ಕೇಳಬೇಕು.

(ಈ ಹಂತದಲ್ಲಿ ಎಲ್ಲ ಮಾನ್ಯ ಸದಸ್ಯರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಂಡರು.)

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೆ,.....

ಅಧ್ಯಕ್ಷರು.—ಮಾನ್ಯ ನಾರಾಯಣ ಕುಮಾರ್‌ರವರೇ ನಾನು ಮುಂದೆ ನಿಮ್ಮ ಮಾತನ್ನು ಸೀರಿಯಸ್ ಆಗಿ ತೆಗೆದುಕೊಳ್ಳುವುದಿಲ್ಲ.